ದಿಃ **29-08-2024** ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

<u>ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ **03** ಮತ್ತು **04** ಪರ ಶ್ರೀ. **GGI** ವಕೀಲರವರಿಂದಃ</u>

ಈ ಹಿಂದೆ ನಮ್ಮ ಕುಟುಂಬದಲ್ಲಿ ಪಾಲು ವಿಭಾಗ ಆಗಿರುವುದಿಲ್ಲ. ಈ ದಾವೆಯನ್ನು ಸಲ್ಲಿಸಲು ಮಾಹಿತಿಯನ್ನು ನಾನೇ ನೀಡಿರುತ್ತೇನೆ. ನನ್ನ ವಾದ ಪತ್ರದ ಪ್ಯಾರಾ ನಂಬರ **06** ರಲ್ಲಿ ಈಗಾಗಲೇ ಆಗಿರುವ ಪಾಲು ವಿಭಾಗದಲ್ಲಿ **01** ನೇ ಪ್ರತಿವಾದಿಯ ಗಂಡನಿಗೆ ಈ ದಾವಾ ಆಸ್ತೀಗಳು ಪಾಲು ವಿಭಾಗದ ಪ್ರಕಾರ ಬಂದಿರುತ್ತವೆ ಎಂದು ಬರೆಸಿರುವುದಿಲ್ಲ. ನನ್ನ ತಂದೆ ತೀರಿದ ನಂತರ ನನ್ನ ಎಲ್ಲ ಕುಟುಂಬದ ಸದಸ್ಯರ ನಡುವೆ ಪಾಲು ವಿಭಾಗ ವಾಯಿತು ಎಂದರೆ ಸರಿಯಲ್ಲ. ನನ್ನ ತಾಯಿ ಹಾಗೂ ನನ್ನ ಸಹೋದರರು ಪಾಲು ವಿಭಾಗದ ಮೇರಗೆ ಕಂದಾಯ ಇಲಾಖೆಗೆ ಸಲ್ಲಿಸಿ ಪಾಲು ವಿಭಾಗದ ಷರತ್ತುಗಳನ್ನು ಜಾರಿಯಲ್ಲಿ ತಂದಿರುತ್ತಾರೆ ಎಂದರೆ ಸರಿಯಲ್ಲ. ಪಾಲು ವಿಭಾಗದ ಮೇರೆಗೆ ದಿ.**28-03-2002** ರಂದು **MR.No.44/2001-2002** ರಂದು ಹಕ್ಕು ಬದಲಾವಣೆ ಆಯಿತು ಎಂದು ನನಗೆ ಗೊತ್ತಿರುವುದಿಲ್ಲ. ಸದರಿ ಹಕ್ಕು ಬದಲಾವಣೆಯ ನಂತರ ನನ್ನ ತಾಯಿ ಮತ್ತು ನನ್ನ ಸಹೋದರರು ವಿಭಕ್ತ ಕುಟುಂಬದ ಸದಸ್ಯರು ಆದೆವು ಎಂದರೆ ಸರಿಯಲ್ಲ. ಸದರಿ ಪಾಲು ವಿಭಾಗದ ಪ್ರಕಾರ ನನ್ನ ತಾಯಿಗೆ ಸರ್ವೇ ನಂಬರ **223, 3** ಎಕರೆಯ ಆಸ್ತೀಯು ಹಾಗೂ **225** ಸರ್ವೇ ನಂಬರಿನ **5** ಎಕರೆ **40** ಸೆಂಟ್ಸ್ ಆಸ್ತೀಯು ಬಂದಿರುತ್ತದೆ ಎಂದರೆ ಸರಿಯಲ್ಲ. ನನ್ನ ತಾಯಿಯು ಅವರ ಅಡಚಣೆಗೋಸ್ಕರ ಅವರ ಹಿಸ್ಸೆಗೆ ಬಂದಂತ ಸರ್ವೇ ನಂಬರ **223, 3** ಎಕರೆಯ ಆಸ್ತೀಯು ಹಾಗೂ **225** ಸರ್ವೇ ನಂಬರಿನ **5** ಎಕರೆ **40** ಸೆಂಟ್ಸ್ ಆಸ್ತೀಯನ್ನು **H.M** ಗುರುಲಿಂಗಯ್ಯ ಮತ್ತು ಅಕ್ಕಿ ಭರತಕುಮಾರ ಎನ್ನುವವರಿಗೆ ಪ್ರತ್ಯೇಕ ಖರೀದಿ ಪತ್ರದ ಮುಖಾಂತರ ಮಾರಾಟ ಮಾಡಿರುವುದು ನನಗೆ ಗೊತ್ತಿರುವುದಿಲ್ಲ. ನಾನು ಈದೇ ನ್ಯಾಯಾಲಯದಲ್ಲಿ ಅಸಲು ದಾವಾ ಸಂಖ್ಯೆ **103/2015** ನ್ನು ಸಲ್ಲಿಸಿರುತ್ತೇನೆ. ಸದರಿ ದಾವೆಯು ಪಾಲು ವಿಭಾಗದ ಪರಿಹಾರಕ್ಕಾಗಿ ಸಲ್ಲಿಸಿರುತ್ತೇನೆ ಎಂದರೆ ಸರಿ. ಸದರಿ ದಾವೆಯನ್ನು ನಾನು ನಡೆಸದೆ ಹಿಂಪಡೆದಿರುತ್ತೇನೆ ಎಂದರೆ ಸರಿ. ಆ ದಾವೆಯನ್ನು ನನ್ನ ತಾಯಿ ಅನಾರೋಗ್ಯದಿಂದ ಬಳಲುತ್ತಿರುವಾಗ ನನ್ನ ಅತ್ತಿಗೆ ಉಮಾ ಪಾಟೀಲರವರು "ದಾವೆಯನ್ನು ವಾಪಸ ತೆಗೆದುಕೊ ನಾವು ಎಲ್ಲರೂ ಕುಳಿತುಕೊಂಡು ಪಾಲು ವಿಭಾಗ ಮಾಡಿಕೊಳ್ಳೊಣ" ಎಂದು ಹೇಳಿದ್ದಕ್ಕೆ ನಾನು ಆ ದಾವೆಯನ್ನು ಹಿಂಪಡೆದಿರುತ್ತೇನೆ. ಈ ಹೇಳಿದ ಪ್ರಕಾರವಾಗಿ ಪಾಲು ವಿಭಾಗ ಮಾಡಿಕೊಳ್ಳಲು ಯಾರೂ ಬಂದಿರುವುದಿಲ್ಲ.

**04.** ನನ್ನ ಸಹೋದರ ಮಂಜುನಾಥಗೌಡ ರವರ ಮಗನಾದ ಗುರುಬಸವನಗೌಡ ರವರು ಹಡಗಲಿಯ ಹಿರಿಯ ದಿವಾಣಿ ನ್ಯಾಯಾಲಯದಲ್ಲಿ ಅಸಲು ದಾವಾ ಸಂಖ್ಯೆ **13/2019** ನ್ನು ವಿಭಾಗಕ್ಕಾಗಿ ನನ್ನ ವಿರುದ್ಧ ಮತ್ತು ಈ ಪ್ರಕರಣದ **03** ನೇ ಪ್ರತಿವಾದಿ ಮತ್ತು ಇತರರ ವಿರುದ್ಧ ಸಲ್ಲಿಸಿರುತ್ತಾನೆ ಎಂದರೆ ಸರಿ. ಸದರಿ ದಾವೆಯು ಇನ್ನು ಚಾಲ್ತಿಯಲ್ಲಿ ಇರುತ್ತದೆ ಎಂದರೆ ಸರಿ. ಸದರಿ ಪ್ರಕರಣದಲ್ಲಿ ನನಗೂ ಸಹ ಪಾಲು ಕೋರಿ ಪ್ರತಿವಾದ ಪತ್ರ ಸಲ್ಲಿಸಿರುವುದಿಲ್ಲ.

**05.** ಈ ದಾವಾ ಆಸ್ತೀಗಳು **03** ನೇ ಪ್ರತಿವಾದಿ ಹೆಸರಿನಲ್ಲಿ ಬದಲಾವಣೆ ಆಗುವ ಮುಂಚೆ **01** ನೇ ಪ್ರತಿವಾದಿಯ ಹೆಸರಿನಲ್ಲಿ ಇರುವುದು ನನಗೆ ಗೊತ್ತಿರುವುದಿಲ್ಲ. ಈ ದಾವೆಯಲ್ಲಿ **03** ನೇ ಪ್ರತಿವಾದಿಯ ಹೆಸರಿನಲ್ಲಿರುವ ಖರೀದಿ ಪತ್ರವನ್ನು ರದ್ದು ಪಡಿಸಿ ನನ್ನದು ಹಕ್ಕು ಈ ಆಸ್ತೀಯಲ್ಲಿ ಇರುತ್ತದೆ ಎಂದು ಸಲ್ಲಿಸಿರುತ್ತೇನೆ. ವಾರಸಾ ಪ್ರಕಾರ ನನ್ನ ಹಕ್ಕು ದಾವಾ ಆಸ್ತೀಯಲ್ಲಿ ಇರುತ್ತದೆ ಎಂದು ಈ ದಾವೆಯನ್ನು ಸಲ್ಲಿಸಿರುತ್ತೇನೆ. ನನ್ನ ವಾದ ಪತ್ರದಲ್ಲಿ **01** ನೇ ಪ್ರತಿವಾದಿಯು ನನ್ನ ಪರವಾಗಿ ಮಾಡಿಕೊಟ್ಟ ಪಾಲು ಪಟ್ಟಿಯ ಮುಖಾಂತರ ನಾನು ದಾವಾ ಆಸ್ತೀಯಲ್ಲಿ ಮಾಲಿಕತ್ವದ ಹಕ್ಕು ಹೊಂದಿದ್ದೇನೆ ಎಂದು ಬರೆಸಿರುತ್ತೇನೆ. ಸದರಿ ಪಾಲು ಪಟ್ಟಿಯನ್ನು ನ್ಯಾಯಾಲಯಕ್ಕೆ ಹಾಜರು ಮಾಡಿರುತ್ತೇನೆ. **01** ನೇ ಪ್ರತಿವಾದಿಯು ನನಗೆ ಬರೆದುಕೊಟ್ಟ ಪಾಲು ಪಟ್ಟಿಯ ದಿನಾಂಕ ನೆನಪು ಇರುವುದಿಲ್ಲ. ಈ ಪಾಲು ಪಟ್ಟಿಯು ನನ್ನ ಸಹೋದರ ಸಂಘನಗೌಡರ ಹೆಸರಿನಲ್ಲಿ ಇದ್ದು ಅದರ ಸಂಬಂಧಪಟ್ಟ ಪಾಲು ಪಟ್ಟಿಯು ಆಗಿರುತ್ತದೆ, ಆದರೆ ಆ ಜಮೀನಿನ ಸರ್ವೇ ನಂಬರಗಳು ನನಗೆ ಗೊತ್ತಿರುವುದಿಲ್ಲ. ಈ ಪಾಲು ಪಟ್ಟಿಯು

ಹಿರೇಮಲ್ಲನಕೇರೆಯ ಗ್ರಾಮದಲ್ಲಿ ದೈವದ ಮುಂದೆ ಆಗಿರುತ್ತದೆ. ದೈವ ಎಂದರೆ ನಾನು ನನ್ನ ತಾಯಿ, ಚನ್ನಬಸವನಗೌಡ, ಅರಸನಾಳ ವೀರಣ್ಣ, ಪಾಟೀಲ ಕೊಟ್ರಗೌಡರು ಮತ್ತು ನಮ್ಮ ಗ್ರಾಮದ ಹಿರಿಯರು. ಸಾಮಾನ್ಯವಾಗಿ ಪಾಲು ಪಟ್ಟಿಯಲ್ಲಿ ಅದಕ್ಕೆ ಸಂಬಂಧಪಟ್ಟ ಎಲ್ಲಾ ಪಕ್ಷಗಾರರಿಗೆ ಹಕ್ಕು ಇರುತ್ತದೆ ಎಂದರೆ ಸರಿ. ಈ ಪಾಲು ಪಟ್ಟಿಯ ಷರತ್ತುಗಳ ಪ್ರಕಾರ **01** ನೇ ಪ್ರತಿವಾದಿಯ ಪ್ರಕಾರ ದಾವಾ ಆಸ್ತೀಯು ಯಾವುದು ಅವರಿಗೆ ಬೇಡ ಅದರ ಬದಲಾಗಿ **1** ವರೆ ಲಕ್ಷ ದುಡ್ಡು ಕೊಡಿ ಎಂದು ಇರುತ್ತದೆ. ಈ ಪಾಲು ಪಟ್ಟಿಗೆ ಪ್ರತಿವಾದಿ **01** ಹಾಗೂ ಅವರ ತಂದೆ ಸಹಿ ಮಾಡಿರುತ್ತಾರೆ. **01** ವರೆ ಲಕ್ಷ ದುಡ್ಡನ್ನು **01** ನೇ ಪ್ರತಿವಾದಿಗೆ ನೀಡಿರುವ ಬಗ್ಗೆ ಪಾಲು ಪಟ್ಟಿಯಲ್ಲಿ ನಮೂದಿಸಿದ್ದು ಅದನ್ನು ಅವರು ತೆಗೆದುಕೊಂಡು ಹೋಗಿರುತ್ತಾರೆ. ಪಾಲು ಪಟ್ಟಿಯನ್ನು ಯಾರು ಬರೆದರು ಎಂದು ನನಗೆ ಗೊತ್ತಿರುವುದಿಲ್ಲ. ಪಾಲು ಪಟ್ಟಿ ಬರೆದವರು ಅವರ ಸಹಿಯನ್ನು ಮಾಡಿರುವುದಿಲ್ಲ. ಈ ಪಾಲು ಪಟ್ಟಿಗೆ ಸ್ವತಂತ್ರ್ಯ ವ್ಯಕ್ತಿಗಳು ಯಾರು ಸಹಿ ಮಾಡಿರುವುದಿಲ್ಲ.

**06.** ಈ ಪಾಲು ಪಟ್ಟಿಯ ಮೇರೆಗೆ ಕಂದಾಯ ಇಲಾಖೆಗೆ ಸಲ್ಲಿಸಿ ಇದರ ಪ್ರಕಾರವಾಗಿ ಹಕ್ಕು ಬದಲಾವಣೆ ಮಾಡಲು ಯಾವುದೇ ಪ್ರಯತ್ನ ಮಾಡಿರುವುದಿಲ್ಲ. ಸಾಕ್ಷಿಯು ಮುಂದುವರೆದು ನನ್ನ ಅಣ್ಣನಾದ ಸಂಘನಗೌಡ ತೀರಿಕೊಂಡು **03** ತಿಂಗಳು ಕಳೆದಿರಲಿಲ್ಲ ಅಷ್ಟರಲ್ಲಿ **01** ನೇ ಪ್ರತಿವಾದಿಯು ಪವರ ಆಫ್ ಅಟಾರ್ನಿಯಾದ ಅವರ ತಂದೆಯಾದ ಹನುಮಂತಪ್ಪರವರು **03** ನೇ ಪ್ರತಿವಾದಿಗೆ ಖರೀದಿ ಪತ್ರವನ್ನು ಮಾಡಿಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ಖರೀದಿ ಪತ್ರದ ನಂತರ ಹಕ್ಕು ಬದಲಾವಣೆಯಾಗದಂತೆ ನನ್ನ ತಾಯಿ ಹಾಗೂ ನನ್ನ ಸಹೋದರ ತಕರಾರನ್ನು ಸಲ್ಲಿಸಿ ಅದು **RTS** ಪ್ರಕರಣ ಎಂದು ನಡಾವಳಿ ಆಗಿರುತ್ತದೆ ಎಂದರೆ ಸರಿ. **01** ನೇ ಪ್ರತಿವಾದಿ ಕಂದಾಯ ಇಲಾಖೆಯಲ್ಲಿ **RTS** ಪ್ರಕರಣದಲ್ಲಿ ಹಾಜರಾಗಿ **03** ನೇ ಪ್ರತಿವಾದಿಯ ಹೆಸರಿಗೆ ಖರೀದಿ ಪತ್ರದಂತೆ ಖಾತಾ ಬದಲಾವಣೆ ಮಾಡಲು ವಾದವನ್ನು ಮಂಡಿಸಿರುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ. **01** ನೇ ಪ್ರತಿವಾದಿಯ ವಾದದ ಮೆರೆಗೆ ನಾಡ ಕಛೇರಿ ಕಾರ್ಯಾಲಯ ಇಟಗಿಯಲ್ಲಿ ದಿ.**22-02-2012** ರಂದು ಖರೀದಿ ಪತ್ರದ ಮೇರೆಗೆ **03** ನೇ ಪ್ರತಿವಾದಿಯ ಹೆಸರಿನಲ್ಲಿ ಹಕ್ಕು ಬದಲಾವಣೆ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ. ಈ ಆದೇಶದ ವಿರುದ್ಧ ನಾನಾಗಲಿ ನನ್ನ ತಾಯಿ ಮತ್ತು ಸಹೋದರರಾಗಲಿ ಮೇಲ್ಮನವಿಯನ್ನು ಸಲ್ಲಿಸಿರುವುದಿಲ್ಲ, ಸಾಕ್ಷಿಯು ಮುಂದುವರೆದು ನಾನು ನ್ಯಾಯಾಲಯಕ್ಕೆ ದಾವೆಯನ್ನು ಸಲ್ಲಿಸಿರುತ್ತೇನೆ ಎಂದು ನುಡಿಯುತ್ತಾರೆ.

**07. 03** ನೇ ಪ್ರತಿವಾದಿಯ ತಂದೆಯ ವಿರುದ್ಧ ನಾನು **FIR** ನ್ನು ದಾಖಲಿಸಿದ್ದೇನೆ ಎಂದರೆ ಸರಿ. ನಾನು ಸಲ್ಲಿಸಿದ **FIR** ನ ನಂತರ **01** ನೇ ಪ್ರತಿವಾಯು ಮರಣ ಹೊಂದಿರುತ್ತಾಳೆ ಎಂದರೆ ನನಗೆ ಗೊತ್ತಿರುವುದಿಲ್ಲ. **01** ನೇ ಪ್ರತಿವಾದಿಯು ವಾಸಿಯಾಗದ ಕಾಯಿಲೆಯಿಂದ ಬಳಲಿ ದಾವಣಗೇರೆ ಚೀಗಟೇರಿ ಆಸ್ಪತ್ರೆಯಲ್ಲಿ ಮರಣ ಹೊಂದಿರುತ್ತಾಳೆ ಎಂದರೆ ನನಗೆ ಗೊತ್ತಿರುವುದಿಲ್ಲ. ನನ್ನ ತಾಯಿಯು **04** ನೇ ಪ್ರತಿವಾದಿಯ ವಿರುದ್ಧ **01** ನೇ ಪ್ರತಿವಾದಿಯನ್ನು ಕೊಲೆಯ ಆರೋಪದಲ್ಲಿ **FIR** ನ್ನು ಸಲ್ಲಿಸಿದ್ದಾರೆ ಎಂದರೆ ನನಗೆ ಗೊತ್ತಿರುವುದಿಲ್ಲ. ಈ ಎರಡು **FIR** ನ ಕ್ರಿಮಿನಲಿ ಮುಕದ್ದಮೆಗಳು ರದ್ದಾಗಿರುವ ಬಗ್ಗೆ ನನಗೆ ಗೊತ್ತಿರುವುದಿಲ್ಲ. **03** ನೇ ಪ್ರತಿವಾದಿಯರು ಖರೀದಿ ಮಾಡಿದ ಆಸ್ತೀಗಳನ್ನು ಎತ್ತಿ ಹಾಕಲು **04** ನೇ ಪ್ರತಿವಾದಿಯ ವಿರುದ್ಧ ಸುಳ್ಳು **FIR** ಪ್ರತಿಗಳನ್ನು ನಾನು ಮತ್ತು ನನ್ನ ಕುಟುಂಬಸ್ಥರು ಹಾಕಿರುತ್ತೇವೆ ಎಂದರೆ ನನಗೆ ಗೊತ್ತಿರುವುದಿಲ್ಲ. **03** ಮತ್ತು **04** ನೇ ಪ್ರತಿವಾದಿಯ ಮೇಲೆ ಒತ್ತಡ ಹೇರಲು ಸದರಿ ಪ್ರಕರಣವನ್ನು ಸುಳ್ಳಾಗಿ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ.

**08. 01** ನೇ ಪ್ರತಿವಾದಿಯು ದಾವಾ ಆಸ್ತೀಯನ್ನು **03** ನೇ ಪ್ರತಿವಾದಿಗೆ ಖರೀದಿ ಮಾಡಲು ಅವರ ತಂದೆಯಾದ **02** ನೇ ಪ್ರತಿವಾದಿಯ ಹೆಸರಿಗೆ ಮುಕ್ತಿಯಾರು ಪತ್ರ ಮಾಡಿದ್ದು ಅದನ್ನು **01** ನೇ ಪ್ರತಿವಾದಿಯು ಅವರ ಜೀವಿತಾವಧಿಯಲ್ಲಿ ಪ್ರಶ್ನೆ ಮಾಡಿರುವುದಿಲ್ಲ ಎಂದರೆ ನನಗೆ ಗೊತ್ತಿರುವುದಿಲ್ಲ. **01** ನೇ ಪ್ರತಿವಾದಿ ಮಾಡಿಕೊಟ್ಟ ಖರೀದಿ ಪತ್ರದ ದಿನದಿಂದ **03** ನೇ ಪ್ರತಿವಾದಿಯು ದಾವಾ ಆಸ್ತೀಯ ಉಪಭೋಗ, ವಹಿವಾಟು ಮಾಡುತ್ತಿದ್ದಾನೆ ಎಂದರೆ ಸಾಕ್ಷಿಯು ನಾವೇ ಅದರ ಅನುಭವದಲ್ಲಿ ಇರುತ್ತೇವೆ ಎಂದು ನುಡಿಯುತ್ತಾರೆ. ನಾವೇ ದಾವಾ ಆಸ್ತೀಗಳ ಸ್ವಾಧೀನದಲ್ಲಿ ಇದ್ದೇವೆ ಎಂದು ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುವುದಿಲ್ಲ. **03** ನೇ ಪ್ರತಿವಾದಿಗೆ

ಕಿರುಕುಳ ನೀಡಬೇಕು ಹಾಗೂ ದಾವಾ ಆಸ್ತಿಗಳನ್ನು ಎತ್ತಿ ಹಾಕಲು ಪಾಲು ಪಟ್ಟಿ ಇರುತ್ತದೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. **01** ನೇ ಪ್ರತಿವಾದಿಯ ತನ್ನ ಜೀವಿತಾವಧಿಯಲ್ಲಿ ನನಗಾಗಲಿ ನನ್ನ ಕುಟುಂಬದ ಸದಸ್ಯರಿಗಾಗಲಿ ಪಾಲು ಪಟ್ಟಿ ಅಥವಾ ಯಾವುದೇ ಪತ್ರವನ್ನು ಬರೆದುಕೊಟ್ಟಿಲ್ಲ ಎಂದರೆ ಸರಿಯಲ್ಲ. **03** ನೇ ಪ್ರತಿವಾದಿಗೆ ಕಿರುಕುಳ ನೀಡಬೇಕೆಂದು ದಾವಾ ಸ್ವತ್ತನ್ನು ಎತ್ತಿ ಹಾಕಬೇಕು ಎಂದು ಸುಳ್ಳು ವಾದ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

*(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)*

ಓ. ಹೇ. ಕೇ. ಸರಿ ಇದೆ

"ನನ್ನ ಸಮಕ್ಷಮ"

**Sd/-**

( ಶ್ರೀಮತಿ ಅಕ್ಷತಾ ಟಿ )

ದಿವಾಣಿ ನ್ಯಾಯಾಧೀಶರು,

ಹಡಗಲಿ.